
UNIVERSITY LIBRARY
Newspaper's Agri Clippings
For more information visit University Library Website
Web - uasbagrilibindia.org
E-mail- librarian@uasbangalore.edu.in
Saturday
23-05-2026

ತುಡುವೆ ಜೇನು ರಾಜ್ಯ ಕೀಟ, ಮರಗಂತಿ ಕಪ್ಪೆ ರಾಜ್ಯ ಉಭಯಜೀವಿ: ಸಚಿವ ಖಂಡ್ರೆ

ಶೀಘ್ರದಲ್ಲೇ ಅಧಿಕೃತ ಘೋಷಣೆ | ಆನೆ, ಹುಲಿ ಕಾರಿಡಾರ್‌ ಮರುಸ್ಥಾಪನೆ: ಅರಣ್ಯ ಸಚಿವ

■ ಉದಯವಾಣಿ ಸಮಾಚಾರ



ಬೆಂಗಳೂರು: ತುಡುವೆ ಜೇನು ರಾಜ್ಯ ಕೀಟ ಮತ್ತು ಮಲೆನಾಡಿನ ಮರಗಂತಿ ಕಪ್ಪೆ ರಾಜ್ಯ ಉಭಯಜೀವಿ ಎಂದು ಅಧಿಕೃತವಾಗಿ ಘೋಷಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪಶುಸಂಗೋಪನೆ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ವಿಶ್ವ ಜೀವವೈವಿಧ್ಯ ದಿನದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಜೀವವೈವಿಧ್ಯತೆಯ ರಕ್ಷಣೆಯ ಮಹತ್ವವನ್ನು ಸಾರಲು ಹಲವು ದೇಶಗಳು ತನ್ನದೇ ಆದ ರಾಷ್ಟ್ರೀಯ ಪಕ್ಷಿ, ಪ್ರಾಣಿ, ವೃಕ್ಷವನ್ನು ಘೋಷಿಸುತ್ತವೆ. ರಾಜ್ಯ ಸರ್ಕಾರ ಕೂಡ ಶ್ರೀಗಂಧವನ್ನು ರಾಜ್ಯ ವೃಕ್ಷವೆಂದು, ಆನೆಯನ್ನು ರಾಜ್ಯ ಪ್ರಾಣಿ ಎಂದು ಹಾಗೂ ನಿಲಕಂಠ ಪಕ್ಷಿಯನ್ನು ರಾಜ್ಯ ಪಕ್ಷಿ ಎಂದು, ಹಳದಿ ಕೆಂಪು ಬಣ್ಣದ ರಕ್ಷಣೆಯ ದೊಡ್ಡ ಚಿಟ್ಟೆಯನ್ನು ರಾಜ್ಯ ಚಿಟ್ಟೆ ಎಂದು ಘೋಷಣೆ ಮಾಡಿದೆ. ರಾಜ್ಯ ಕೀಟ ಹಾಗೂ ರಾಜ್ಯ ಉಭಯಜೀವಿ ಘೋಷಣೆಯನ್ನು ಸದ್ಯದಲ್ಲೇ ಮಾಡಲಾಗುತ್ತದೆ ಎಂದರು.

ಎಚ್‌ಎಂಟಿ, ಭಾರತೀಯ ವಾಯುಪಡೆ, ಖಾಸಗಿ ರಬ್ಬರ್‌ತೋಟ ಕಂಪನಿಗಳ ವಶದಲ್ಲಿರುವ 50 ಸಾವಿರ ಕೋಟಿ ರೂ. ಮೌಲ್ಯದ ಅರಣ್ಯ ಭೂಮಿಯನ್ನು ಮರಳಿ ಪಡೆದು, ಹಸಿರು ಹೊದಿಕೆ ರಕ್ಷಿಸಲು, ಅರಣ್ಯ ಸಂವರ್ಧನೆ ಮಾಡಲು ರಾಜ್ಯ ಸರ್ಕಾರ ನ್ಯಾಯಾಲಯದಲ್ಲಿ ಹೋರಾಟ ನಡೆಸುತ್ತಿದೆ. ಯಲಹಂಕ ಬಳಿಯ ಮಾದಪ್ಪನಹಳ್ಳಿಯಲ್ಲಿ 153 ಎಕರೆ ಪ್ರದೇಶದಲ್ಲಿ ವಿಶ್ವಗುರು ಬಸವಣ್ಣ ಬೃಹತ್ ಜೈವಿಕ ಉದ್ಯಾನ ಅಭಿವೃದ್ಧಿಗೆ ಮುಂದಾಗಿದ್ದು 250 ಕೋಟಿ ರೂ. ವೆಚ್ಚದ ಈ ಉದ್ಯಾನಕ್ಕೆ ಮುಖ್ಯಮಂತ್ರಿಗಳು ಮೊದಲ ಹಂತದ ಕಾಮಗಾರಿಗೆ 50 ಕೋಟಿ ರೂ. ಹಂಚಿಕೆ ಮಾಡಿದ್ದಾರೆ ಎಂದರು.

ಕಳೆದ 3 ವರ್ಷಗಳಲ್ಲಿ ಸುಮಾರು 12204 ಎಕರೆ ಅರಣ್ಯ ಭೂಮಿ ಒತ್ತುವರಿ ತೆರವುಗೊಳಿಸಲಾಗಿದೆ. ಯಾವುದೇ ಹೊಸ ಒತ್ತುವರಿಗೆ ಆವಕಾಶ ನೀಡದಂತೆ ಸೂಚಿಸಲಾಗಿದೆ. ಆನೆ, ಹುಲಿ ಕಾರಿಡಾರ್‌ವಿಭಜನೆ ಆಗಿರುವ ಕಡೆಯಲ್ಲಿ ಕಾರಿಡಾರ್‌ಮರು ಸ್ಥಾಪನೆಗೆ ಪ್ರಯತ್ನಿಸಲಾಗುತ್ತದೆ ಎಂದರು.

Hosadiganta pg 08

Hosadiganta pg 08


ಕೃಷಿ ವಿಶ್ವವಿದ್ಯಾಲಯದ ಸಂಶೋಧನಾ ನಿರ್ದೇಶಕ ಡಾ. ಮೂಡಲಗಿರಿಯಪ್ಪ ಅಭಿಪ್ರಾಯ

ಪೋಷಕಾಂಶದಿಂದ ಮಣ್ಣಿನ ಆರೋಗ್ಯ

• **ದೊಡ್ಡಬಳ್ಳಾಪುರ:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಣ್ಣಿನಲ್ಲಿ ಸಾವಯವ ಇಂಗಾಲದ ಪ್ರಮಾಣ ಕಡಿಮೆಯಾಗುತ್ತಿದ್ದು, ಅಸಮತೋಲಿತ ರಸಗೊಬ್ಬರಗಳ ಬಳಕೆಯಿಂದ ಮಣ್ಣು ಸತ್ವ ಕಳೆದುಕೊಳ್ಳುತ್ತಿರುವುದನ್ನು ಸರಿಪಡಿಸಲು ಬಯೋಚಾರ್ ಬಳಕೆ ಅನಿವಾರ್ಯವಾಗಿದೆ ಎಂದು ಕೃಷಿ ವಿಶ್ವವಿದ್ಯಾನಿಲಯದ ಸಂಶೋಧನಾ ನಿರ್ದೇಶಕ ಡಾ.ಮೂಡಲಗಿರಿಯಪ್ಪ ಅಭಿಪ್ರಾಯ ಪಟ್ಟರು.

ಅವರು ತಾಲೂಕಿನ ಹಾಡೋನಹಳ್ಳಿಯ ಕೃಷಿ ವಿಜ್ಞಾನ ಕೇಂದ್ರದಲ್ಲಿ ಬೆಂಗಳೂರಿನ ಜಿಕೆವಿಕೆ ಕೃಷಿ ವಿಶ್ವವಿದ್ಯಾನಿಲಯದ ಮಣ್ಣು ಪರೀಕ್ಷೆ ಬೆಳೆ ಸ್ಪಂದನೆ ಯೋಜನೆ ಹಾಗೂ ಕೃಷಿ ವಿಜ್ಞಾನ ಕೇಂದ್ರದ ಸಹಯೋಗದೊಂದಿಗೆ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ ರೈತರಿಗಾಗಿ ಆಯೋಜಿಸಿದ್ದ ಒಂದು ದಿನದ ವಿಶೇಷತರಬೇತಿ ಶಿಬಿರದಲ್ಲಿ ಮಾತನಾಡಿದರು. ಕೃಷಿಯಲ್ಲಿ ಸಮತೋಲಿತ ಪೋಷಕಾಂಶಗಳ ಸಮರ್ಪಕ ನಿರ್ವಹಣೆಯು ಬೆಳೆಗಳ ಸುಸ್ಥಿರ ಉತ್ಪಾದಕತೆಯನ್ನು ಹೆಚ್ಚಿಸುವುದಲ್ಲದೆ, ಮಣ್ಣಿನ ದೀರ್ಘಕಾಲೀನ ಆರೋಗ್ಯ ಮತ್ತು ಫಲವತ್ತತೆಗೆ ಪ್ರಮುಖ ತಳಹದಿಯಾಗಿದೆ.

ಈ ಜೈವಿಕ ಇದ್ದಿಲು ಮಣ್ಣಿನ ಸೂಕ್ಷ್ಮಜೀವಿಗಳಿಗೆ ಜೀವರಕ್ಷಕವಾಗಿ ಕೆಲಸ ಮಾಡುವುದಲ್ಲದೆ, ಪೋಷಕಾಂಶಗಳು ಮಳೆ ಅಥವಾ ನೀರಾವರಿಯಿಂದ ಕೊಚ್ಚಿಹೋಗದಂತೆ ತಡೆಯುತ್ತದೆ. ಇದನ್ನು ಒಮ್ಮೆ ಜಮೀನಿಗೆ ಸೇರಿಸಿದರೆ ಬಹಳ ವರ್ಷಗಳಕಾಲ ಅಲ್ಲೇ ಉಳಿದು ಫಲವತ್ತತೆಯನ್ನು ಕಾಪಾಡುತ್ತದೆ. ವಿಶ್ವವಿದ್ಯಾನಿಲಯದ ಇಂತಹ ಹೊಸ ಸಂಶೋಧನೆಗಳು ಮತ್ತು ಮಣ್ಣು ಪರೀಕ್ಷೆ ಆಧಾರಿತ ತಂತ್ರಜ್ಞಾನಗಳು ನೇರವಾಗಿ ರೈತರ ಜಮೀನಿಗೆ ತಲುಪಬೇಕು, ಆಗ ಮಾತ್ರ ರೈತರ ಆರ್ಥಿಕ ಮಟ್ಟ ಸುಧಾರಿಸಲು ಸಾಧ್ಯ ಎಂದು ಕಿವಿಮಾತು ಹೇಳಿದರು. ಮಣ್ಣು ವಿಜ್ಞಾನಿ ಮತ್ತು ಈ ಯೋಜನೆಯ ಮುಖ್ಯಸ್ಥ ಡಾ.ಆರ್. ಕೃಷ್ಣಮೂರ್ತಿ ಮಾತನಾಡಿ, ಬಯೋಚಾರ್ ಅಥವಾ ಜೈವಿಕ ಇದ್ದಿಲು ಅಂದರೆ, ನಮ್ಮ ಹೊಲದಲ್ಲಿ ಸಿಗುವ ಕಸ-ಕಡ್ಡಿಗಳನ್ನು ಕಡಿಮೆ ಗಾಳಿಯಲ್ಲಿ ಸುಟ್ಟು ಮಾಡುವಂತಹ ಇದ್ದಿಲು. ಇದು ಬೂದಿಯ ತರಹ ಇರುವುದಿಲ್ಲ, ಬದಲಿಗೆ ಇದರಲ್ಲಿರುವ ಸಣ್ಣ ಸಣ್ಣ ರಂಧ್ರಗಳು ನೀರು ಮತ್ತು ಪೋಷಕಾಂಶಗಳನ್ನು ಬಹಳ ಕಾಲ ಹಿಡಿದಿಟ್ಟುಕೊಳ್ಳುತ್ತವೆ. ನೀರಿನ ಕೊರತೆ ಇರುವ ರೈತರಿಗೆ ಇದು ಬಹಳ ಉಪಯೋಗ. ಅಲ್ಲದೆ, ರೈತರು ಇಂಗಾಲದ ಸ್ಥಿರೀಕರಣದ ಮೂಲಕ ಕಾರ್ಬನ್ ಕ್ರೆಡಿಟ್ ಪಡೆದು ಮಾರುಕಟ್ಟೆಯಲ್ಲಿ ಮಾರಿ ಹೆಚ್ಚುವರಿ ಆದಾಯ ಕೂಡ ಗಳಿಸಬಹುದು ಎಂದು ತಿಳಿಸಿದರು.



ಕೃಷಿ ಅರಣ್ಯ ಪದ್ಧತಿ ಅಳವಡಿಸಿಕೊಳ್ಳುವುದು ಬಹಳ ಮುಖ್ಯ

ಜಿಕೆವಿಕೆಯ ಕೃಷಿ ಅರಣ್ಯ ವಿಭಾಗದ ಮುಖ್ಯಸ್ಥ ಡಾ.ಡಿ.ಸಿ.ಹನುಮಂತಪ್ಪ ಮಾತನಾಡಿ, ರೈತರು ಕೃಷಿ ಅರಣ್ಯ ಪದ್ಧತಿಯನ್ನು ಅಳವಡಿಸಿಕೊಳ್ಳುವುದು ಬಹಳ ಮುಖ್ಯ. ಹೊಲದ ಬದುಗಳಲ್ಲಿ ಅಥವಾ ಬೆಳೆಗಳ ಮಧ್ಯೆ ಮರಗಳನ್ನು ಬೆಳೆಸುವುದರಿಂದ, ಅವುಗಳ ಉದುರಿದ ಎಲೆಗಳು ಮಣ್ಣಿಗೆ ಸೇರಿ ನೈಸರ್ಗಿಕ ಗೊಬ್ಬರವಾಗುತ್ತವೆ. ಇದರಿಂದ ಬೆಳೆಗಳಿಗೆ ಸಮತೋಲಿತ ಪೋಷಕಾಂಶ ಸಿಗುವುದರ ಜೊತೆಗೆ, ಮಣ್ಣಿನ ಫಲವತ್ತತೆ ಶಾಶ್ವತವಾಗಿ ಉಳಿಯುತ್ತದೆ. ಬೆಳೆಗಳಿಗೆ ಸರಿಯಾದ ಪ್ರಮಾಣದಲ್ಲಿ ಪೋಷಕಾಂಶ ಒದಗಿಸುವ ಬಗ್ಗೆ ಹಾಗೂ ಕೃಷಿ ಅರಣ್ಯದ ಮಹತ್ವದ ಬಗ್ಗೆ ರೈತರಿಗೆ ತಿಳಿಸಿಕೊಟ್ಟರು.

> **ದಕ್ಷಿಣ ಕರ್ನಾಟಕದ ಸಣ್ಣ ಮತ್ತು ಅತಿಸಣ್ಣ ರೈತರ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವ ಉದ್ದೇಶದಿಂದ ಈ ಶಿಬಿರ ಆಯೋಜಿಸಲಾಗಿದೆ. ರೈತರು ಬರೀ ಯೂರಿಯಾ, ಡಿಎಪಿ, ಪೋಟ್ಯಾಷ್ ಮಾತ್ರ ಹಾಕುವ ಮೊದಲು ಮಣ್ಣು ಪರೀಕ್ಷೆ ಮಾಡಿಸಿ, ಮಣ್ಣಿಗೆ ಏನು ಬೇಕೋ ಆ ಸೂಕ್ಷ್ಮ ಪೋಷಕಾಂಶಗಳನ್ನೂ ಸರಿಯಾದ ಪ್ರಮಾಣದಲ್ಲಿ ಕೊಡಬೇಕು ಇದರಿಂದ ಮಣ್ಣು ಚೆನ್ನಾಗಿರುತ್ತದೆ. ಗೊಬ್ಬರದ ಖರ್ಚು ಉಳಿಯುವುದು ಹಾಗೂ ಒಳ್ಳೆಯ ಇಳುವರಿ ಸಿಗುತ್ತದೆ.**
>
> ■ ಡಾ.ಬಿ.ಜೆ.ಹನುಮಂತರಾಯ, ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ

ಮತ್ತೊಬ್ಬ ಮಣ್ಣು ವಿಜ್ಞಾನಿ ಡಾ.ಪಿ.ವೀರನಾಗಪ್ಪ ರೈತರು ತಮ್ಮ ಹೊಲದಲ್ಲಿ ಸಿಗುವ ರೇಷ್ಮೆ ಕಡ್ಡಿ, ತೆಂಗಿನ ಸಿಪ್ಪೆ, ಮಾವಿನ ರೆಂಬೆಗಳು ಅಥವಾ ಟೊಮೆಟೊ ಗಿಡದ ಕಡ್ಡಿಗಳನ್ನು ಬಳಸಿ ಸುಲಭವಾಗಿ ಈ ಇದ್ದಿಲು ಮಾಡಿಕೊಳ್ಳಬಹುದು. ಇದನ್ನು ಮಣ್ಣಿಗೆ ಹಾಕುವುದರಿಂದ ಮಣ್ಣಿನ ಆಮ್ಲೀಯತೆ (ಹುಳಿ ಅಂಶ) ಕಡಿಮೆಯಾಗುತ್ತದೆ ಹಾಗೂ ಭಾರವಾದ ಲೋಹದ ಮಾಲಿನ್ಯಕಾರಕಗಳು ನಿವಾರಣೆಯಾಗಿ ಮಣ್ಣಿನ ಗುಣಮಟ್ಟ ಮತ್ತು ಬೆಳೆ ಇಳುವರಿ ಕೂಡ ಹೆಚ್ಚಾಗುತ್ತದೆ ಎಂದು ಬಯೋಚಾರ್‌ನ ಲಾಭಗಳನ್ನು ವಿವರಿಸಿದರು.

ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ಬೇಸಾಯ ಶಾಸ್ತ್ರ ವಿಜ್ಞಾನಿ ಡಾ.ಜಿ.ಕೆ.ನಿಂಗರಾಜು, ಮಣ್ಣು ವಿಜ್ಞಾನಿ ಡಾ. ಬಾಲಾಜಿ ನಾಯ್ಕ್, ಮಣ್ಣು ಪರೀಕ್ಷೆ ಮತ್ತು ಬೆಳೆ ಸ್ಪಂದನೆ ಪ್ರಾಯೋಜನೆಯ ಸಹ ಸಂಶೋಧಕ ಡಾ.ಕೆ.ಗೋವಿಂದ ಉಪಸ್ಥಿತರಿದ್ದರು.

ಕಿವಿ ಟ್ಯಾಗ್ ಬದಲು ಹಸುಗಳಿಗೂ ಆಧಾರ್ ರೀತಿ ಗುರುತಿನ ಚೀಟಿ

ಲಸಿಕೆ, ಮರಣ ಸಂಬಂಧಿತ ಕ್ಲೈಮ್‌ಗಳಿಗೆ ಹೆಚ್ಚು ಅನುಕೂಲ

ಸಂ.ಕ.ಸಮಾಚಾರ, ಬೆಂಗಳೂರು

ಕರ್ನಾಟಕದಲ್ಲಿ ಅತಿ ಶೀಘ್ರವೇ ಹಸುಗಳು ಸಖತ್ ಸ್ಮಾರ್ಟ್ ಆಗಲಿವೆ. ಅಂದ್ರೆ ಬಯೊಮೆಟ್ರಿಕ್ಸ್ ಬಳಸಿ ಡಿಜಿಟಲ್ ಗುರುತಿನ ಚೀಟಿಗಳನ್ನು ಹಸುಗಳಿಗೆ ಪರಿಚಯಿಸಲು ರಾಜ್ಯ ಸರ್ಕಾರ ಚಿಂತನೆ ನಡೆಸಿದೆ.

ಈ ಗುರುತಿನ ಚೀಟಿಗಳ ಮೂಲಕ ಹಸುಗಳಿಗೆ ಹಾಕಿಸಿದ ಹಾಗೂ ಹಾಕಿಸಬೇಕಾದ ಲಸಿಕೆ ಬಗ್ಗೆ ರೈತರಿಗೆ ಎಸ್‌ಎಂಎಸ್ ಮೂಲಕ ಸಂದೇಶ ಬರಲಿದೆ, ಆರೋಗ್ಯ ಸ್ಥಿತಿ ಮತ್ತು ವಿಮೆ ಅಥವಾ ಮರಣ ಸಂಬಂಧಿತ ಕ್ಲೈಮ್‌ಗಳನ್ನು ಶೀಘ್ರವೇ ಪಡೆಯಲು ಹೆಚ್ಚು ಅನುಕೂಲವಾಗಲಿದೆ. ಅತಿ ಮುಖ್ಯವಾಗಿ ಜಾನುವಾರುಗಳ ಸಂಬಂಧಿತ ಯೋಜನೆಗಳಲ್ಲಿನ ವಂಚನೆಗಳನ್ನು ತಡೆಯಬಹುದಾಗಿದೆ. ಈ ಗುರುತಿನ ಚೀಟಿಗಳು ಜಾನುವಾರುಗಳಿಗೆ 'ಆಧಾರ್ ಕಾರ್ಡ್' ಇದ್ದಂತೆ.

ಭಾರತದಲ್ಲಿ ಇದೇ ಮೊದಲ ಬಾರಿಗೆ ಈ ರೀತಿಯ ಉಪಕ್ರಮ ಜಾರಿಗೆ ತರಲಾಗುತ್ತಿದೆ. ಇಷ್ಟು ದಿನಗಳ ಕಾಲ ಹಸು, ಎಮ್ಮೆ ಕಿವಿಗಳಿಗೆ ಇಯರ್ ಟ್ಯಾಗ್‌ಗಳನ್ನು ಹಾಕಲಾಗುತ್ತಿತ್ತು. ಈ ವ್ಯವಸ್ಥೆಯನ್ನು ಬದಲಾಯಿಸಿ ಆಧಾರ್ (ಉಪಕ್ರಮ) ರೀತಿಯ ವ್ಯವಸ್ಥೆಯನ್ನು ಜಾರಿಗೆ ತರಲಾಗುತ್ತಿದೆ. ಈಗಾಗಲೇ ಈ ಪದ್ಧತಿ ಪ್ರಾಯೋಗಿಕ ಅನುಷ್ಠಾನಕ್ಕೆ ಸಿದ್ಧವಾಗಿದೆ.ಮಾನವನ ಬೆರಳಚ್ಚುಗಳಂತೆಯೇ ಹಸುಗಳ ಮೂಗಿನ ಮೇಲಿನ ಗೆರೆಗಳ (ಮೂತಿ) ಮೂಲಕ ನಿಖರವಾಗಿ ಗುರುತಿಸಲು ಈ ಉಪಕ್ರಮವು ಅನುವು ಮಾಡಿಕೊಡುತ್ತದೆ ಹಾಗೂ ಜಾನುವಾರು ಸಂಬಂಧಿತ ಯೋಜನೆಗಳಲ್ಲಿನ ವಂಚನೆಯನ್ನು ತಡೆಗಟ್ಟಲು ಮತ್ತು ಅನುಷ್ಠಾನದಲ್ಲಿ ಪಾರದರ್ಶಕತೆಯನ್ನು ಸುಧಾರಿಸಲು ನೆರವಾಗಲಿದೆ ಎಂದು ಇ-ಆಡಳಿತ ಪ್ರಧಾನ ಕಾರ್ಯದರ್ಶಿ ಪಂಕಜ್ ಕುಮಾರ್ ತಿಳಿಸಿದರು.

ಎಸ್ ಎಂಎಸ್ ಮೂಲಕ ಸಂದೇಶ

> ರೈತರಿಗೆ ಲಸಿಕೆ ದಿನಾಂಕ ಕುರಿತು ಎಸ್‌ಎಂಎಸ್ ಮೂಲಕ ಸಂದೇಶಗಳು ಬರಲಿವೆ. ನವಜಾತ ಜಾನುವಾರುಗಳಿಗೂ ಡಿಜಿಟಲ್ ರೆಕಾರ್ಡಿಂಗ್ ಮಾಡಬಹುದು. ಮೂತಿಯ ಫೋಟೋಗಳನ್ನು ಸ್ಕ್ಯಾನ್ ಮಾಡುವ ಮೂಲಕ ಜಾನುವಾರುಗಳ ಆರೋಗ್ಯ ಸಂಬಂಧಿತ ಮೌಲ್ಯಮಾಪನ ಮಾಡಬಹುದು.
>
> • ಶ್ರೀವ್ಯಾಸ್.ಎಜ್.ಎಂ, ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಸೆಲ್‌ನ ಯೋಜನಾ ನಿರ್ದೇಶಕ

S-karnataka pg 05


Karnataka set to name honeybee, Malabar tree toad as state species

Niranjan.Kaggere@timesofindia.com

Bengaluru: Ending a six-year wait since experts first recommended the move, Karnataka govt Friday announced it will soon officially declare the honeybee species Tudave Jenu (Apis cerana) as the state insect and the Malabar tree toad (Pedostibes tuberculosus) as the state frog in an effort to strengthen biodiversity conservation measures. Forest and ecology minister Eshwar Khandre said a formal notification is expected within days.

Marking International Biodiversity Day at Vidhana Soudha, Khandre said Karnataka is following the global trend of recognising species that symbolise ecological significance. "Several countries across the globe announce their own national birds, animals and trees to emphasise the importance of biodiversity conservation. Similarly, the state govt has also declared sandalwood as the state tree, elephant as state animal and Neelakantha (Indian roller) as state bird besides naming the colourful butterfly — Southern Birdwing (Troides minos) as the state butterfly in the past. Now, these two — insect and amphibian — will be added to the list from conservation perspective," the minister said.

TOI



Apis cerana (left) and Malabar tree toad

Karnataka Biodiversity Board had, during 2020-21, recommended the two species after consultations with entomologists from the University of Agricultural Sciences (UAS), batrachologists, Indian Institute of Science (IISc) ecologists, and horticulture and home department officials. Experts have flagged declining populations of Apis cerana due to habitat loss, climate change and the spread of the Thai sacbrood virus.

Malabar tree toad, an arboreal amphibian first documented in 1875-76, had disappeared from the records for over a century before being rediscovered in Kerala in 1980. It was later documented in parts of Western Ghats in Karnataka as well.

Expressing concern over the shrinking forest cover and rising ecological pressures, Khandre also said the govt will intensify efforts to reclaim forest land worth nearly Rs 50,000 crore across Karnataka. "We have been fighting at various courts to reclaim forest land valued at Rs 50,000 crore currently held by Indian Air Force (IAF), HMT and private rubber plantation companies," he said.

Referring to the recent elephant tragedy at Dubare, the minister stressed that mitigating human-wildlife conflict remains a top priority. "The recent tragedy at Dubare is shocking. Even as we continue to witness unprecedented and unheard of incidents, fragmentation of elephant corridors, changes in tiger paths, the increasing number of wild animals and shrinking of forests are resulting in increased incidents of human-wildlife conflicts in Karnataka. Hence, the govt has taken strict measures to clear forest encroachments and reclaimed about 12,204 acres of forest land in the last three years, and 110 million saplings have been planted, nurtured across Karnataka," Khandre clarified.

Times of Ind pg 05

ಮುಂಗಾರು ಕೃಷಿ ಅನ್ನದಾತರಿಗೆ ವೆಚ್ಚ ಭಾರ

ಬೆಲೆ ಏರಿಕೆಯಿಂದ ಸಂಕಷ್ಟ। ರಾಜ್ಯದಲ್ಲಿ ಸುಮಾರು 70 ಲಕ್ಷ ಹೆಕ್ಟೇರ್‌ನಲ್ಲಿ ಮುಂಗಾರು ಕೃಷಿ

■ ಆದರ್ಶ ಕೋಡಿ ಬೆಂಗಳೂರು ಗ್ರಾಮಾಂತರ
c-adarsha.k@timesofindia.com

ರಾಜ್ಯದಲ್ಲಿ ಸಂಕಷ್ಟದಲ್ಲಿರುವ ರೈತರಿಗೆ ಕೃಷಿ ಅಗತ್ಯತೆಗಳ ಬೆಲೆ ಏರಿಕೆಯಿಂದ ಮತ್ತಷ್ಟು ಸಂಕಷ್ಟ ಎದುರಾಗಿದೆ. ಇದರಿಂದ ಈ ವರ್ಷ ಮುಂಗಾರು ಬೇಸಾಯಕ್ಕೆ ಹಿಚ್ಚಿನ ಬಂಡವಾಳದ ಅಗತ್ಯತೆ ಎದುರಾಗಲಿದೆ.

ಹೌದು, ರಾಜ್ಯಾದ್ಯಂತ ಈಗಾಗಲೇ ಮುಂಗಾರಿನ ಕೃಷಿ ಚಟುವಟಿಕೆಗಳು ಗರಿಗೆದರಿವೆ. ಸುಮಾರು 70ಲಕ್ಷ ಹೆಕ್ಟೇರ್‌ಗೂ ಹೆಚ್ಚಿನ ಕೃಷಿ ಪ್ರದೇಶದಲ್ಲಿ ರಾಗಿ, ಭತ್ತ, ಜೋಳ, ನಜ್ಜೆ ತೊಗರಿ, ಕಡಲೆಕಾಯಿ ಸೇರಿದಂತೆ ನಾನಾ ಬೆಳೆಗಳನ್ನು ಬೆಳೆಯುತ್ತಾರೆ. ಆದರೆ ಮಧ್ಯಪ್ರಾಚ್ಯದ ದೇಶಗಳ ಯುದ್ಧದ ಪರಿಣಾಮ ಇಂಧನ ಬೆಲೆ ಏರಿಕೆ, ರಸಗೊಬ್ಬರಗಳ ಪೂರೈಕೆ, ದರ ಏರಿಕೆ ಕಂಡುಬಂದಿದೆ. ಕಾರ್ಮಿಕರ ಕೂಲಿ ಮೆಚ್ಚಿನೊಂ ಮತ್ತಷ್ಟು ದುಬಾರಿಯಾಗಿದ್ದು, ಕೃಷಿಗೆ ತಗಲುವ ವೆಚ್ಚದ ಮೇಲೆ ಸಾಕಷ್ಟು ಪರಿಣಾಮ ಬೀರುವಂತಾಗಿದೆ.

ಉಳುಮೆಯೇ ದುಬಾರಿ: ರಾಜ್ಯದಲ್ಲಿ ಬಹುತೇಕ ಎತ್ತುಗಳ ಉಳುಮೆ ಪ್ರಮಾಣ ಕಡಿಮೆಯಾಗಿದೆ. ಟ್ರ್ಯಾಕ್ಟರ್‌ಗಳಿಂದ ಉಳುಮೆ ಮಾಡಲು ರೈತರು ಮುಂದಾಗುತ್ತಿದ್ದಾರೆ. ಈ ಬಾರಿ ಡೀಸೆಲ್ ದರ ಏರಿಕೆ ಕಂಡಿದೆ. ಟ್ರ್ಯಾಕ್ಟರ್ ಬಾಡಿಗೆ ಕಳೆದ ವರ್ಷ ಸಾವಿರದವರೆಗಿತ್ತು. ಈ ವರ್ಷ ಗಂಟೆಗೆ ರೈತರಿಂದ 1200 ರೂ. ಬಾಡಿಗೆ ಪಡೆದರೂ ಡೀಸೆಲ್, ಡ್ರೈವರ್ ಕೂಲಿ ಇನ್ನಿತರೆ ಖರ್ಚು ಹೊಂದಿಸುವುದು ಕಷ್ಟವಾಗುತ್ತದೆ ಎನ್ನುತ್ತಿದ್ದಾರೆ ಟ್ರ್ಯಾಕ್ಟರ್ ಮಾಲೀಕರು.



ವಿಶೇಷ ಪ್ಯಾಕೇಜ್ ನೀಡಿ ರಾಜ್ಯದಲ್ಲಿ ಈ ವರ್ಷ ಬೆಲೆ ಏರಿಕೆ, ಹವಾಮಾನ ವೈಪರೀತ್ಯದಿಂದ ಮುಂಗಾರು ಕೃಷಿ ಸವಾಲಿನಿಂದ ಕೂಡಿದೆ. ಇದರಿಂದ ಸರಕಾರ ರೈತರ ಕೃಷಿಯ ಅಗತ್ಯತೆಗಳಿಗೆ ವಿಶೇಷ ಸಬ್ಸಿಡಿ, ಬಡ್ಡಿರಹಿತ ಸಾಲ, ವಿಶೇಷ ಬೆಲೆ ನೀಡಲು ವಿಶೇಷ ಪ್ಯಾಕೇಜ್ ಘೋಷಣೆ ಮಾಡಲು ರೈತ ಸಂಘಟನೆಗಳು ಆಗ್ರಹಿಸಿವೆ.

ರಾಜ್ಯದ ರೈತಾಪಿ ವರ್ಗ ಸಂಕಷ್ಟದಲ್ಲಿದೆ. ಕೃಷಿ ಅಗತ್ಯತೆಗಳ ಬೆಲೆ ಗಗನಕ್ಕೇರಿದೆ. ಇಂಧನ ರೈಲಗಳ ಬೆಲೆ ಏರಿಕೆಯಿಂದ ಕೃಷಿ ವೆಚ್ಚ ಏರಿಕೆ ಕಂಡಿದೆ. ಇದರಿಂದ ಸರಕಾರ ರೈತರಿಗೆ ವಿಶೇಷ ಪ್ಯಾಕೇಜ್ ಘೋಷಣೆ ಮಾಡಿ ನೆರವಾಗಬೇಕಿದೆ.

-ಯಶವಂತ್ ಟಿ. ರಾಜ್ಯ ಪ್ರಧಾನ ಕಾರ್ಯದರ್ಶಿ, ಪ್ರಾಂತ ರೈತ ಸಂಘ

ದರ ಹೇಗಿದೆ?

ಯಾವುದರ ಬೆಲೆ	ಕಳೆದ ವರ್ಷ ರೂ.ಗಳಲ್ಲಿ	ಪ್ರಸಕ್ತ ಸಾಲಿನ ದರ
ಟ್ರ್ಯಾಕ್ಟರ್ ಬಾಡಿಗೆ	900-1000 (ಗಂಟೆಗೆ)	1200-1300
ಟ್ರಿಲ್ಲರ್	650 -700 (ಗಂಟೆಗೆ)	850-900
ಡಿಎಪಿ	1300(45 ಕೆಜಿ ಚೀಲ)	1400
ಯೂರಿಯಾ	200-220(50 ಕೆಜಿಗೆ)	250(40 ಕೆಜಿಗೆ)
ಕೊಟ್ಟಿಗೆ ಗೊಬ್ಬರ	3000-3500(ಟ್ರ್ಯಾಕ್ಟರ್‌ಗೆ)	4500-5000
ಬಿತ್ತನೆ ಬೆಚ್ಚ ಎಕರೆಗೆ	3000- 3500	5000

ರಸಗೊಬ್ಬರ, ಕೊಟ್ಟಿಗೆ ಗೊಬ್ಬರದಲ್ಲೂ ಏರಿಕೆ: ರಾಜ್ಯದಲ್ಲಿ ಸದ್ಯ 38 ಸಾವಿರ ಮೆಟ್ರಿಕ್ ಟನ್ ರಸಗೊಬ್ಬರ ಕೊರತೆಯಾಗಿದೆ ಎಂದು ಈಗಾಗಲೇ ಕೃಷಿ ಸಚಿವ ಚಲುವರಾಯ ಸ್ವಾಮಿ ಮಾಹಿತಿ ನೀಡಿದ್ದಾರೆ. ಇದರ ಬೆನ್ನಲ್ಲೇ ರಾಜ್ಯದ ಹಲವು ಕಡೆಗಳಲ್ಲಿ ರೈತರಿಗೆ ಅಗತ್ಯವಾದ ಯೂರಿಯಾ, ಡಿಎಪಿ ಸೇರಿದಂತೆ ಬಹುತೇಕ ರಸಗೊಬ್ಬರಗಳ ಚೀಲದ ಮೇಲೆ 100ರಿಂದ 200 ರೂ.ವರೆಗೂ ಏರಿದೆ. ಇದಲ್ಲದೇ, ಕೊಟ್ಟಿಗೆ ಗೊಬ್ಬರದ ಬೆಲೆಯಲ್ಲೂ ಕಳೆದ ವರ್ಷಕ್ಕೆ ಹೋಲಿಸಿದರೆ ಪ್ರತಿ ಟ್ರ್ಯಾಕ್ಟರ್ ಬೆಲೆಯಲ್ಲಿ 2000 ರೂ.ವರೆಗೆ ಏರಿಕೆ ಕಂಡಿದೆ ಎಂದು ರೈತರು ತಮ್ಮ ಅಳಲು ತೋಡಿಕೊಂಡಿದ್ದಾರೆ.

V-karnataka pg 07

ಮೇ 26ಕ್ಕೆ ಅಗ್ರಿ ಸ್ಟಾರ್ಟ್‌ಅಪ್ ಕಾಂಕ್ಲೇವ್

ಬೆಂಗಳೂರು: ಕೃಷಿ ವಿಶ್ವವಿದ್ಯಾಲಯದ ಅಗ್ರಿ ಇನೋವೇಶನ್ ಸೆಂಟರ್ ವತಿಯಿಂದ ಅಗ್ರಿ ಸ್ಟಾರ್ಟ್ ಅಪ್ ಕಾಂಕ್ಲೇವ್ 2.0 – ಇನ್ನೋವೇಟ್, ಸುಸ್ಟೈನ್ ಸ್ಕೇಲ್ – 2026 ಕಾರ್ಯಕ್ರಮವನ್ನು ಮೇ 26 ರಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಕೃಷಿ ವಿಶ್ವವಿದ್ಯಾಲಯದ ಉತ್ತರ ಬ್ಲಾಕ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮವನ್ನು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಉದ್ಘಾಟಿಸಲಿದ್ದು, ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ಎ. ಸುರೇಶ ಅಧ್ಯಕ್ಷತೆ ವಹಿಸಲಿದ್ದಾರೆ. ಈ ಕಾನ್‌ಕ್ಲೇವ್ ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ವಿವಿಧ ಪ್ರಮುಖರಾದ ಅಗ್ರಿ ಸ್ಟಾರ್ಟ್ ಅಪ್‌ಗಳು, ಉದ್ಯಮಿಗಳು, ಸಂಶೋಧಕರು, ಹೂಡಿಕೆದಾರರು, ವಿದ್ಯಾರ್ಥಿಗಳು, ಕೈಗಾರಿಕೆಗಳು ಹಾಗೂ ರೈತ ಉತ್ಪಾದಕರ ಸಂಘಟನೆಗಳು ಈ ವೇದಿಕೆಯಲ್ಲಿ ಒಗ್ಗೂಡಲಿವೆ. ಭಾರತೀಯ ಕೃಷಿಯ ಭವಿಷ್ಯವನ್ನು ರೂಪಿಸುತ್ತಿರುವ ಹೊಸ ವ್ಯವಹಾರದ ಅವಕಾಶಗಳು ಹಾಗೂ ನವೀನ ತಂತ್ರಜ್ಞಾನಗಳನ್ನು ಇಲ್ಲಿ ಪ್ರದರ್ಶಿಸಲಾಗುತ್ತದೆ. ಸುಸ್ಥಿರ ಅಗ್ರಿ ಉದ್ಯಮ ನಿರ್ಮಾಣ, ಕಾರ್ಬನ್ ಮಾರುಕಟ್ಟೆ ಅವಕಾಶಗಳು ಮತ್ತು ಜೈವಿಕ ಇನ್‌ಪುಟ್‌ಗಳ ನವೀನತೆಗಳ ಕುರಿತು ತಜ್ಞರಿಂದ ತಾಂತ್ರಿಕ ಅಧಿವೇಶನಗಳು ನಡೆಯಲಿವೆ. ಈ ಕಾರ್ಯಕ್ರಮಕ್ಕೆ ಸಾರ್ವಜನಿಕರು ಮತ್ತು ಆಸಕ್ತರಿಗೆ ಪ್ರವೇಶ ಉಚಿತವಾಗಿದ್ದು, ಆದರೆ ನೋಂದಣಿ ಮಾಡಿಕೊಳ್ಳುವುದು ಕಡ್ಡಾಯವಾಗಿದೆ. ಹೆಚ್ಚಿನ ಮಾಹಿತಿ ಮತ್ತು ನೋಂದಣಿಗಾಗಿ 9739055445 / 9538164928 / 8431332653 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

V-karnataka pg 07

ಬಿತ್ತನೆ ಬೀಜ ವಿತರಣೆ ಅವ್ಯವಸ್ಥೆ ಮಾತಿನಲ್ಲೇ ಉಳಿದ ರೈತಕಾಳಜಿ

ಬಿತ್ತನೆ ಬೀಜಗಳಿಗಾಗಿ ರೈತರು ಪರದಾಡುವ ಸ್ಥಿತಿ ಹಾವೇರಿ ಜಿಲ್ಲೆಯಲ್ಲಿ ಉಂಟಾಗಿದೆ. ಇದು, ಹಳೆಯ ತಪ್ಪುಗಳಿಂದ ಪಾಠ ಕಲಿಯದ ಸರ್ಕಾರಿ ವ್ಯವಸ್ಥೆಯ ಸಂವೇದನಾಶೂನ್ಯ ಮನಃಸ್ಥಿತಿಯ ಹಾಗೂ ಕೃಷಿಯನ್ನು ಆದ್ಯತೆಯ ವಿಷಯವನ್ನಾಗಿ ಸರ್ಕಾರ ಪರಿಗಣಿಸದೆ ಇರುವುದರ ಸಂಕೇತವಂತಿದೆ. ಜಿಲ್ಲೆಯಲ್ಲಿ ಮುಂಗಾರುಪೂರ್ವ ಮಳೆ ಉತ್ತಮವಾಗಿ ಆಗಿರುವುದರಿಂದ ಬಿತ್ತನೆ ಬೀಜ ಖರೀದಿಗೆ ಬೇಡಿಕೆ ಉಂಟಾಗಿದೆ. ಅದು ಸಹಜವಾದ ಬೆಳವಣಿಗೆಯೇ. ಆದರೆ, ಮುಂಗಾರು ಆಸುಪಾಸಿನಲ್ಲಿ ಬಿತ್ತನೆ ಬೀಜಕ್ಕೆ ಬೇಡಿಕೆ ಎದುರಾಗುವ ನಿರೀಕ್ಷೆಯಿದ್ದರೂ, ಆ ಬೇಡಿಕೆಯನ್ನು ನಿರ್ವಹಿಸಲು ಕೃಷಿ ಇಲಾಖೆ ತಕ್ಕ ಸಿದ್ಧತೆ ನಡೆಸದಿರುವುದಕ್ಕೆ ಯಾವುದೇ ಸಮರ್ಥನೆಯಿಲ್ಲ. ಕಳೆದ ಮೂರು ವರ್ಷಗಳಿಂದಲೂ ಬಿತ್ತನೆ ಬೀಜ ಮತ್ತು ರಸಗೊಬ್ಬರ ಪೂರೈಕೆಯ ಕೊರತೆ ಬಗ್ಗೆ ರಾಜ್ಯದ ವಿವಿಧ ಭಾಗಗಳಲ್ಲಿ ದೂರುಗಳು ವ್ಯಕ್ತವಾಗಿದ್ದವು. ಆ ಸಮಸ್ಯೆ ಈ ವರ್ಷವೂ ಮುಂದುವರಿದಿರುವುದನ್ನು ಹಾವೇರಿಯಲ್ಲಿನ ರೈತರ ಸಂಕಷ್ಟ ಸೂಚಿಸುವಂತಿದೆ. ಬೀಜ ಖರೀದಿಗಾಗಿ 'ರೈತ ಸಂಪರ್ಕ ಕೇಂದ್ರ'ದ (ಆರ್‌ಎಸ್‌ಕೆ) ಎದುರು ರೈತರು ಹಗಲು-ಇರುಳು ಸರದಿಯಲ್ಲಿ ನಿಲ್ಲಬೇಕಾದ ಸ್ಥಿತಿ ರೂಪುಗೊಂಡಿರುವುದು ಇಲಾಖೆಯ ಅದಕ್ಷತೆಗೆ ನಿದರ್ಶನದಂತಿದೆ. ಮಹಿಳೆಯರು, ಹಿರಿಯ ನಾಗರಿಕರು ಕೂಡ ಸರದಿಯಲ್ಲಿ ನಿಂತು ತೊಂದರೆ ಅನುಭವಿಸಿದ್ದಾರೆ. ಪೊಲೀಸ್ ಭದ್ರತೆಯಲ್ಲಿ ಬೀಜ ವಿತರಣೆ ನಡೆದಿರುವ ಘಟನೆಗಳೂ ವರದಿಯಾಗಿವೆ. ಬೀಜ ವಿತರಣಾ ಕೇಂದ್ರಗಳ ಎದುರೇ ರೈತರು ಮಲಗುವ ಸ್ಥಿತಿ ಕೆಲವೆಡೆ ತಲೆದೋರಿದೆ. ನಿತ್ಯಕರ್ಮಗಳನ್ನು ಬಯಲಿನಲ್ಲಿ ಮುಗಿಸಿ, ಆರ್‌ಎಸ್‌ಕೆ ಎದುರು ರೈತರು ಬಿಸಿಲಿನಲ್ಲಿ ನಿಲ್ಲುವಂತಾಗಿರುವುದು ಕೋಚನೀಯ. ರೈತರನ್ನು ಅನ್ನದಾತರೆಂದು ಹೇಳುತ್ತಲೇ, ಅವರ ಶ್ರಮ, ಸಮಯ ಹಾಗೂ ಆತ್ಮಗೌರವವನ್ನು ಲಘುವಾಗಿ ಕಾಣುವ ಘಟನೆಗಳು ಮತ್ತೆ ಮತ್ತೆ ನಡೆಯುವುದು ದುರದೃಷ್ಟಕರ.



ಬಿತ್ತನೆ ಬೀಜ ಪಡೆಯಲು ರೈತರು ಹಗಲು-ರಾತ್ರಿ ಸರದಿಯಲ್ಲಿ ನಿಲ್ಲಬೇಕಾದ ಪರಿಸ್ಥಿತಿ ಉಂಟಾಗಿರುವುದು, ಸರ್ಕಾರದ ರೈತಕಾಳಜಿಯ ಟೊಳ್ಳುತನವನ್ನು ಸೂಚಿಸುವಂತಿದೆ.

ಜಿಲ್ಲೆಯಲ್ಲಿ ಅಗತ್ಯವಿದ್ದಷ್ಟು ಬೀಜ ದಾಸ್ತಾನು ಇರುವುದರಿಂದ ರೈತರು ಆತಂಕ ಪಡಬೇಕಿಲ್ಲ; ಹೆಚ್ಚಿನ ಸಂಖ್ಯೆಯಲ್ಲಿ ಕೃಷಿಕರು ಬರುತ್ತಿರುವುದರಿಂದ ಆನ್‌ಲೈನ್ ನೋಂದಣಿ ವಿಳಂಬವಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ರೈತರು ಹೆಚ್ಚಿನ ಸಂಖ್ಯೆಯಲ್ಲಿ ಬರುವ ಸಂದರ್ಭದಲ್ಲಿ 'ಆರ್‌ಎಸ್‌ಕೆ'ಗಳ ಸಂಖ್ಯೆಯನ್ನು ಹೆಚ್ಚಿಸುವುದು ಹಾಗೂ ಕೇಂದ್ರಗಳಿಗೆ ಬರುವ ರೈತರಿಗೆ ಮೂಲ ಸೌಲಭ್ಯಗಳನ್ನು ಒದಗಿಸುವುದು ಕೃಷಿ ಇಲಾಖೆಯ ಕರ್ತವ್ಯ. ಆನ್‌ಲೈನ್‌ನಲ್ಲಿ ರೈತರ 'ಆರ್‌ಟಿಸಿ' ಪರಿಶೀಲಿಸಿ, ರಶೀದಿಯೊಂದಿಗೆ ಬೀಜ ನೀಡಬೇಕಾದುದರಿಂದ ವಿತರಣೆಯ ಪ್ರಕ್ರಿಯೆ ವಿಳಂಬವಾಗುತ್ತಿದೆ ಎಂದೂ ಹೇಳಲಾಗುತ್ತಿದೆ. ತಂತ್ರಜ್ಞಾನ ಎಷ್ಟೇ ಆಧುನಿಕವಾದರೂ ಅದು ಸರ್ಕಾರಿ ವ್ಯವಸ್ಥೆಯಲ್ಲಿ ತನ್ನ ವೇಗ ಮತ್ತು ದಕ್ಷತೆಯನ್ನು ಕಳೆದುಕೊಳ್ಳುತ್ತದೆ ಎನ್ನುವುದಕ್ಕೆ ಇದು ಇನ್ನೊಂದು ಉದಾಹರಣೆಯಷ್ಟೇ. ಮಳೆ-ಬೆಳೆಗೆ ಸಂಬಂಧಿಸಿದಂತೆ ಪ್ರತಿ ಜಿಲ್ಲೆಯ ಮುನ್ನೋಟ ಕೃಷಿ ಇಲಾಖೆಯ ಬಳಿಯಿರುತ್ತದೆ, ಇರಬೇಕು. ಎಲ್ಲ ಮಾಹಿತಿಯನ್ನು ಹೊಂದಿದ್ದೂ, ರೈತರ ಅಗತ್ಯಗಳನ್ನು ಪೂರೈಸುವುದಕ್ಕೆ ಸಂಬಂಧಿಸಿದಂತೆ ನೆಪಗಳನ್ನು ಹೇಳುವುದು ಯೋಜನಾಶೂನ್ಯತೆಯ ಸ್ಪಷ್ಟ ಸೂಚನೆಯಾಗಿದೆ. ಕೃಷಿಚಕ್ರದ ಆರಂಭದ ಬಿಂದುವಾದ ಬಿತ್ತನೆ ಬೀಜಗಳ ವಿತರಣೆಯಲ್ಲೇ ಸಮಸ್ಯೆಯಾದರೆ, ಅದರ ಪರಿಣಾಮ ಇಡೀ ಕೃಷಿಋತುವಿನ ಮೇಲಾಗುತ್ತದೆ. ಕೃಷಿ ಇಲಾಖೆಯ ವೈಫಲ್ಯವೇ ರೈತರು ಖಾಸಗಿ ಸಂಸ್ಥೆಗಳ ಬಲೆಗೆ ಹೋಗುವ, ಕಳಪೆ ಗುಣಮಟ್ಟದ ಬೀಜಗಳನ್ನು ಕೊಂಡು ಸಂಕಷ್ಟ ಎದುರಿಸುವ ಸ್ಥಿತಿ ಉಂಟುಮಾಡುತ್ತದೆ.

ಪಶ್ಚಿಮ ಪಷ್ಯಾದಲ್ಲಿನ ಬಿಕ್ಕಟ್ಟಿನ ಪರಿಣಾಮದಿಂದಾಗಿ ಕೇಂದ್ರ ಸರ್ಕಾರದಿಂದ ರಾಜ್ಯದ ಬೇಡಿಕೆಗೆ ಅನುಗುಣವಾಗಿ ರಸಗೊಬ್ಬರ ಪೂರೈಕೆಯಾಗುತ್ತಿಲ್ಲ; ಹಾಗಾಗಿ, ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ರಸಗೊಬ್ಬರ ಪೂರೈಕೆಯಲ್ಲಿ ವ್ಯತ್ಯಯ ಎದುರಾಗಬಹುದು ಎಂದು ಕೃಷಿ ಸಚಿವರು ಇತ್ತೀಚೆಗಷ್ಟೇ ಹೇಳಿದ್ದಾರೆ. ಜನಸಾಮಾನ್ಯರಿಗೆ ಮಿತವ್ಯಯದ ಪಾಠ ಹೇಳಿರುವ ಪ್ರಧಾನಿ, ಸಾವಯವ ಕೃಷಿ ಅನುಸರಿಸುವಂತೆ ರೈತರಿಗೆ ಕಿವಿಮಾತು ಹೇಳಿದ್ದಾರೆ. ಈ ಮೂಲಕ, ರಸಗೊಬ್ಬರ ಪೂರೈಕೆಯಲ್ಲಿ ಎದುರಾಗಬಹುದಾದ ವ್ಯತ್ಯಾಸಕ್ಕೆ ಸಂಬಂಧಿಸಿದಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಮ್ಮ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವ ಸೂಚನೆ ನೀಡಿವೆ. ಎಲ್ ನಿನೊ ಪರಿಣಾಮದಿಂದಾಗಿ ಮುಂಗಾರು ದುರ್ಬಲವಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮುನ್ಸೂಚನೆ ನೀಡಿದೆ. ಎಲ್ಲ ಕಡೆಗಳಿಂದಲೂ ರೈತರು ಸಂಕಷ್ಟ ಎದುರಿಸಬೇಕಾಗಿದೆ. ಸರ್ಕಾರದ ಕಾಳಜಿ ಮಾತುಗಳಿಗಷ್ಟೇ ಸೀಮಿತವಾಗದೆ, ಕ್ರಿಯೆಯಲ್ಲಿ ಕಾಣಿಸಿಕೊಳ್ಳಬೇಕು. ರಾಜ್ಯದ ಯಾವುದೇ ಭಾಗದಲ್ಲಿ ಬಿತ್ತನೆ ಬೀಜ ಮತ್ತು ರಸಗೊಬ್ಬರ ಕೊರತೆ ಎದುರಾಗದಂತೆ ನೋಡಿಕೊಳ್ಳುವುದು ಸರ್ಕಾರದ ಹೊಣೆಗಾರಿಕೆ ಹಾಗೂ ನೈತಿಕತೆ.

Prajavani Pg 07

ಬಿತ್ತನೆ ಬೀಜಗಳ ಕೊರತೆ ಇಲ್ಲ

ಬೆಂಗಳೂರು: ಮುಂಗಾರು ಹಂಗಾಮಿಗೆ ಅಗತ್ಯ ಪ್ರಮಾಣದ ಬಿತ್ತನೆ ಬೀಜ ಲಭ್ಯವಿದ್ದು, ರೈತರು ಆತಂಕಪಡುವ ಅಗತ್ಯವಿಲ್ಲ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರಿಗೆ ಶುಕ್ರವಾರ ಮಾಹಿತಿ ನೀಡಿ, ಹಾವೇರಿ ಜಿಲ್ಲೆಯಲ್ಲಿ ಮಳೆ ಆಗುತ್ತಿರುವುದರಿಂದ ರೈತ ಸಂಪರ್ಕ ಕೇಂದ್ರಗಳಿಗೆ ಹೆಚ್ಚಿನ ರೈತರು ಭೇಟಿ ನೀಡಿ ಬಿತ್ತನೆ ಬೀಜಗಳನ್ನು ಪಡೆಯುತ್ತಿದ್ದಾರೆ. ಈ ಹಿನ್ನೆಲೆ ಬಿತ್ತನೆ ಬೀಜಗಳ ಪೂರೈಕೆ ಕೃಷಿ ಇಲಾಖೆ ಕ್ರಮ ಕೈಗೊಂಡಿದೆ. ಹಾವೇರಿ ಜಿಲ್ಲೆಯಲ್ಲಿ ಸೋಯಾಬೀನ್‌ಗೆ 8,960 ಕ್ವಿಂಟಾಲ್ ಹಾಗೂ ಶೇಂಗಾ (ನೆಲಗಡಲೆ) ಬೀಜಕ್ಕೆ 1,344 ಕ್ವಿಂಟಾಲ್ ಬೇಡಿಕೆ ಅಂದಾಜಿಸಲಾಗಿದೆ. ಅದರ ಅನುಸಾರ ಈಗಾಗಲೇ 2,733 ಕ್ವಿಂಟಾಲ್ ಸೋಯಾಬೀನ್ ಹಾಗೂ 305 ಕ್ವಿಂಟಾಲ್ ಶೇಂಗಾ ಬೀಜ ದಾಸ್ತಾನು ಮಾಡಲಾಗಿದೆ ಎಂದರು.

ರಾಜ್ಯ ಮಟ್ಟದಲ್ಲಿಯೂ ಸೋಯಾಬೀನ್ ಬೀಜಕ್ಕೆ 1.80 ಲಕ್ಷ ಕ್ವಿಂಟಾಲ್ ಬೇಡಿಕೆ ಅಂದಾಜಿಸಲಾಗಿದ್ದು, 2.09 ಲಕ್ಷ ಕ್ವಿಂಟಾಲ್ ಬೀಜ ಲಭ್ಯವಿದೆ. ನೆಲಗಡಲೆ ಬೀಜಕ್ಕೆ 0.70 ಲಕ್ಷ ಕ್ವಿಂಟಾಲ್ ಬೇಡಿಕೆ ಇದ್ದು, 0.74 ಲಕ್ಷ ಕ್ವಿಂಟಾಲ್ ದಾಸ್ತಾನು ಲಭ್ಯವಿದೆ. ಒಟ್ಟಾರೆ ಎಲ್ಲಾ ಬೆಳೆಗಳು ಸೇರಿ 4.71 ಲಕ್ಷ ಕ್ವಿಂಟಾಲ್ ಬೇಡಿಕೆಗೆ ಅನುಗುಣವಾಗಿ 5.46 ಲಕ್ಷ ಕ್ವಿಂಟಾಲ್ ಬಿತ್ತನೆ ಬೀಜ ಲಭ್ಯವಿದೆ. ರೈತ ಸಂಪರ್ಕ ಕೇಂದ್ರಗಳ ಮೂಲಕ ಕ್ಯೂ ಆರ್ ಕೋಡ್ ವ್ಯವಸ್ಥೆ ಅಳವಡಿಸಿ ಅರ್ಹ ರೈತರಿಗೆ ಬೀಜ ವಿತರಿಸಲು ಕ್ರಮ ಕೈಗೊಳ್ಳಲಾಗಿದೆ. ಬೀಜ ಲಭ್ಯತೆಯಲ್ಲಿ ಕೊರತೆ ಇಲ್ಲದೇ ಇರುವುದರಿಂದ ರೈತರು ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ ಎಂದು ಕೃಷಿ ಇಲಾಖೆ ಸ್ಪಷ್ಟಪಡಿಸಿದೆ. ಹೆಚ್ಚಿನ ಮಾಹಿತಿಗೆ ರೈತರು ಸಮೀಪದ ರೈತ ಸಂಪರ್ಕ ಕೇಂದ್ರ, ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಉಪ ಕೃಷಿ ನಿರ್ದೇಶಕರ ಕಚೇರಿ ಅಥವಾ ಜಂಟಿ ಕೃಷಿ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ಸಚಿವರು ತಿಳಿಸಿದರು.



Vijayavani Pg 06

22.90 ಲಕ್ಷ ಮೆಟ್ರಿಕ್ ಟನ್ ಸಂಗ್ರಹಣಾ ಸಾಮರ್ಥ್ಯ | ವ್ಯವಸ್ಥಿತ, ಕ್ರಿಯಾಶೀಲ ಕಾರ್ಯನಿರ್ವಹಣೆ

ರೈತಸ್ನೇಹಿ, ಬಹೂಪಯೋಗಿ ರಾಜ್ಯ ಉಗ್ರಾಣ ನಿಗಮ

ಕೃಷಿ ಉತ್ಪನ್ನಗಳು, ಬೀಜಗಳು, ಗೊಬ್ಬರ, ಕೃಷಿ ಉಪಕರಣ ಮತ್ತು ಅಧಿಸೂಚಿತ ಸರಕುಗಳನ್ನು ವೈಜ್ಞಾನಿಕವಾಗಿ ಸಂಗ್ರಹಿಸುವ ಮತ್ತು ಸೂಕ್ತ ಕಾಲದಲ್ಲಿ ರೈತರು ತಾವು ಸಂಗ್ರಹಿಸಿಟ್ಟ ಉತ್ಪನ್ನಗಳನ್ನು ಮಾರಾಟ ಮಾಡಲು ಅನುಕೂಲವಾಗುವಂತೆ ನೆರವಾಗಲು ರಾಜ್ಯ ಉಗ್ರಾಣ ನಿಗಮ ವ್ಯವಸ್ಥಿತ ಮತ್ತು ಕ್ರೀಯಾಶೀಲವಾಗಿ ಕಾರ್ಯ ನಿರ್ವಹಿಸುತ್ತಿದೆ.

ನಿಗಮದ ಹಿನ್ನೆಲೆ: ಕರ್ನಾಟಕ ರಾಜ್ಯ ಗೋದಾಮು ನಿಗಮ (ಕೆಎಸ್‌ಡಬ್ಲ್ಯೂಸಿ) ಅನ್ನು 1957ರಲ್ಲಿ ಕೃಷಿ ಉತ್ಪನ್ನಗಳ (ಅಭಿವೃದ್ಧಿ ಮತ್ತು ಗೋದಾಮು) ನಿಗಮಗಳ ಕಾಯ್ದೆ 1956ರ ಅಡಿಯಲ್ಲಿ ಸ್ಥಾಪಿಸಲಾ ಯಿತು. ನಂತರ ಈ ಕಾಯ್ದೆಯನ್ನು 1962ರ ಗೋದಾಮು ನಿಗಮಗಳ ಕಾಯ್ದೆಯಿಂದ ರದ್ದುಗೊಳಿಸಲಾಯಿತು. 1957ರಲ್ಲಿ ಮೈಸೂರು, ಹುಬ್ಬಳ್ಳಿ ಮತ್ತು ರಾಯಚೂರಿ ನಲ್ಲಿ ಕೇವಲ 3 ಗೋದಾಮುಗಳೊಂದಿಗೆ ಕಾರ್ಯನಿರ್ವಹಿಸಲು ಪ್ರಾರಂಭಿಸಿದ ನಿಗಮ, ಈಗ ಸುಮಾರು 22.90 ಲಕ್ಷ ಲಕ್ಷ ಮೆಟ್ರಿಕ್ ಟನ್ ಒಟ್ಟು ಸ್ವಾಮ್ಯದ ಸಂಗ್ರಹಣಾ ಸಾಮರ್ಥ್ಯದೊಂದಿಗೆ 185 ಉಗ್ರಾಣ ಕೇಂದ್ರಗಳ ಜಾಲವನ್ನು ಹೊಂದಿದೆ. ರಾಜ್ಯದಲ್ಲಿ ಶೇಖರಣೆಗಾಗಿ ಭಾರಿ ಬೇಡಿಕೆ ಇರುವ ಹಿನ್ನೆಲೆಯಲ್ಲಿ ವೈಜ್ಞಾನಿಕ ಉಗ್ರಾಣಗಳನ್ನು ನಿರ್ಮಾಣ ಮಾಡುವ ಮೂಲಕ ಕೊಯ್ಲಿನ ನಂತರದ ನಷ್ಟವನ್ನು ತಪ್ಪಿಸಲು ಸಹಾಯ ಮಾಡುತ್ತಿದೆ.



ಬಾಹ್ಯಕೀಟನಾಶಕ ಸೇವೆ

ಕ್ರಿಮಿಕೀಟಗಳು, ಇಲಿ ನಿಯಂತ್ರಣ. ಸರಕುಗಳಿಗೆ ಧೂಮೋಪಚಾರ ಮಾಡುವ ಮೂಲಕ ಗುಣಮಟ್ಟ ಕಾಪಾಡುವುದು, ಕೀಟನಾಶಕ ಸೇವೆಯು ಹೊಸ ಕಟ್ಟಡಗಳಿಗೆ ಗೆದ್ದಲು ನಿರೋಧಕ ಸೇವೆಯನ್ನು ಒದಗಿಸುವ ಕಾರ್ಯದಲ್ಲಿ ನಿಗಮವು ತೊಡಗಿಸಿಕೊಂಡಿದೆ. ಬಾಹ್ಯಕೀಟನಾಶಕ ಸೇವೆಯನ್ನು ಅಕ್ಕಿ ಗಿರಣಿಗಳು, ಸಿನಿಮಾ ಮಂದಿರಗಳು, ಗ್ರಂಥಾಲಯ ಮತ್ತು ಇತರೇ ಆಹಾರ ಪದಾರ್ಥಗಳ ಸಂಸ್ಕರಣಾ ಘಟಕಗಳಿಗೆ ಬೆಂಗಳೂರಿನಲ್ಲಿ ವಿಸ್ತರಿಸಲಾಗಿದೆ.



ರಾಜ್ಯದಲ್ಲಿ ಹೊಸದಾಗಿ ಕಟ್ಟಿರುವ ಉಗ್ರಾಣಗಳು ಸೇರಿದಂತೆ ಎಲ್ಲ ಉಗ್ರಾಣಗಳನ್ನು ವೈಜ್ಞಾನಿಕವಾಗಿ ನಿರ್ವಹಣೆ ಮಾಡಲಾಗುತ್ತಿದೆ. ಖಾಸಗಿ ಸಹಭಾಗಿತ್ವದಲ್ಲಿ ಶಿಥಲೀಕರಣ (ಕೋಲ್ಡ್ ಸ್ಟೋರೇಜ್) ಘಟಕಗಳನ್ನು ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ. ಹೊಸದಾಗಿ ಕಟ್ಟಿರುವ ಉಗ್ರಾಣಗಳು ಉತ್ತಮವಾಗಿವೆ. ಆದರೆ, ಅಲ್ಲಿಗೆ ರಸ್ತೆ ಸಂಪರ್ಕ ಮತ್ತು ಮೂಲ ಸೌಕರ್ಯಗಳು ಇಲ್ಲದಿರುವುದು ಗಮನಕ್ಕೆ ಬಂದಿದೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಉಗ್ರಾಣಗಳ ಅಭಿವೃದ್ಧಿಗಾಗಿ ಸಿಎಂ ಸಿದ್ದರಾಮಯ್ಯ ಅವರು, 60 ಕೋಟಿ ಅನುದಾನವನ್ನು ಕೊಟ್ಟಿದ್ದು, ಇದನ್ನು ಬಳಕೆ ಮಾಡಿ ಅಭಿವೃದ್ಧಿ ಮಾಡಲು ಉದ್ದೇಶಿಸಲಾಗಿದೆ. ಪ್ರತಿ ಉಗ್ರಾಣದ ಬಳಿಯೂ ಬೋರ್‌ವೆಲ್ ಇರಬೇಕು. ಕುಡಿಯುವ ನೀರಿನ ಸಂಪರ್ಕ ಆಗಬೇಕು ಎಂದು ಪ್ರಯತ್ನ ಮಾಡಲಾಗುತ್ತಿದೆ. ಖಾಸಗಿಯವರ ಸಹಭಾಗಿತ್ವದಲ್ಲಿ ರೂಫ್ ಟಾಪ್ ಯೋಜನೆಯಲ್ಲಿ ಸೋಲಾರ್ ಪ್ಯಾನಲ್ ಅಳವಡಿಕೆ ಮಾಡಿದರೆ 100 ಮೆವಾ ವಿದ್ಯುತ್ ಉತ್ಪಾದನೆ ಮಾಡಬಹುದು ಎನ್ನುವ ಅಂದಾಜಿದೆ. ಹಾಗಾಗಿ ಈ ನಿಟ್ಟಿನಲ್ಲಿಯೂ ಗಂಭೀರ ಪ್ರಯತ್ನ ನಡೆದಿದೆ. ಎಲ್ಲಾ ಉಗ್ರಾಣಗಳ ಬಳಿಯೂ ತೂಕ ಯಂತ್ರಗಳನ್ನು ಅಳವಡಿಸಲು ನಿರ್ಧರಿಸಲಾಗಿದೆ. ಬಹಳ ವರ್ಷಗಳಿಂದ ಬಾಕಿ ಉಳಿದಿದ್ದ ಅಧಿಕಾರಿಗಳು ಮತ್ತು ನೌಕರರಿಗೆ ಮುಂಬಡ್ತಿ ನೀಡಲಾಗಿದೆ. ಸಿಎಂ, ಡಿಸಿಎಂ ಮಾರ್ಗದರ್ಶನದಲ್ಲಿ ಉಗ್ರಾಣ ನಿಗಮದಲ್ಲಿ ಸಾಕಷ್ಟು ಬದಲಾವಣೆ ತರಲಾಗಿದ್ದು, ಈ ನಿಟ್ಟಿನಲ್ಲಿ ಅಭಿವೃದ್ಧಿಗೂ ಹೆಚ್ಚಿನ ಆದ್ಯತೆ ನೀಡಲಾಗಿದೆ. | **ಎನ್.ಸಂಪಂಗಿ** ಅಧ್ಯಕ್ಷರು, ಕರ್ನಾಟಕ ರಾಜ್ಯ ಉಗ್ರಾಣ ನಿಗಮ

ಉಗ್ರಾಣ ಬಳಕೆದಾರರು

ರೈತರು, ವರ್ತಕರು, ವ್ಯಾಪಾರಸ್ಥರು, ಭಾರತ ಆಹಾರ ನಿಗಮ, ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ, ನಾಫೆಡ್, ರಾಜ್ಯ ಸಹಕಾರ ಮಾರಾಟ ಮಹಾಮಂಡಲ ನಿಯಮಿತ, ಕರ್ನಾಟಕ ಎಣ್ಣೆಕಾಳು ಬೆಳೆಗಾರರ ಒಕ್ಕೂಟ. ರಸಗೊಬ್ಬರ ಕಂಪನಿಗಳು, ಸಕ್ಕರೆ ಕಾರ್ಖಾನೆಗಳು, ರಾಜ್ಯ ಪಾನೀಯ ನಿಗಮ ನಿಯಮಿತ, ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್. ಕರ್ನಾಟಕ ಹಾಲು ಒಕ್ಕೂಟ ನಿಯಮಿತ, ಇತರೆ ಸರ್ಕಾರದ ಹಾಗೂ ಖಾಸಗಿ ಸಂಸ್ಥೆಗಳು.

ವಿಭಾಗವಾರು ಕೇಂದ್ರಗಳು

ಕಲಬುರಗಿ ವಿಭಾಗ, ರಾಯಚೂರು ವಿಭಾಗ, ಹುಬ್ಬಳ್ಳಿ ವಿಭಾಗ, ಶಿವಮೊಗ್ಗ ವಿಭಾಗ, ದಾವಣಗೆರೆ ವಿಭಾಗ, ಮೈಸೂರು ವಿಭಾಗ, ಬೆಂಗಳೂರು ವಿಭಾಗ



ರಾಜ್ಯ ಉಗ್ರಾಣ ನಿಗಮದಿಂದ 1,49,54,225 ರೂ.ಗಳ ಲಾಭಾಂಶದ ಚೆಕ್ ಅನ್ನು ಸಿಎಂ ಸಿದ್ದರಾಮಯ್ಯ ಅವರಿಗೆ ಹಸ್ತಾಂತರಿಸಲಾಯಿತು.

ನಿಗಮದ ಕಾರ್ಯ ಚಟುವಟಿಕೆಗಳು

● ರೈತರು ಮತ್ತು ಇತರ ದಾಸ್ತಾನುದಾರರ ಅನುಕೂಲಕ್ಕಾಗಿ ವೈಜ್ಞಾನಿಕ ಗೋದಾಮುಗಳ ನಿರ್ಮಾಣ ● ಕೃಷಿ ಉತ್ಪನ್ನಗಳು, ಬೀಜಗಳು, ಗೊಬ್ಬರಗಳು, ರಸಗೊಬ್ಬರಗಳು, ಕೃಷಿ ಉಪಕರಣಗಳು ಮತ್ತು ಇತರ ಅಧಿಸೂಚಿತ ಸರಕುಗಳನ್ನು ಸಂಗ್ರಹಿಸುವುದು ಮತ್ತು ವೈಜ್ಞಾನಿಕವಾಗಿ ಸಂರಕ್ಷಣೆ ● ಕೃಷಿ ಉತ್ಪನ್ನಗಳು, ಬೀಜಗಳು, ಗೊಬ್ಬರ ಇತ್ಯಾದಿಗಳ ಸಾಗಣೆಯನ್ನು ಸುಗಮಗೊಳಿಸುವುದು

ಉಪಯೋಗಗಳು

■ದಾಸ್ತಾನು ಮಾಡಿದ ಸರಕುಗಳನ್ನು ವೈಜ್ಞಾನಿಕವಾಗಿ ಸಂರಕ್ಷಿಸಿ, ಭದ್ರತೆ ಒದಗಿಸುವುದು ■ಗೋದಾಮುಗಳಲ್ಲಿ ಸಂಗ್ರಹಿಸಿದ ಸರಕುಗಳಿಗೆ ವಿಮೆ ರಕ್ಷಣೆ ■ಉಗ್ರಾಣದಲ್ಲಿ ಸಂಗ್ರಹಿಸುವ ದಾಸ್ತಾನಿನ ಮೇಲೆ ವಿಧಿಸುವ ಸಂಗ್ರಹಣಾ ಶುಲ್ಕದಲ್ಲಿ ರೈತರಿಗೆ ಶೇಕಡ 30%ರಷ್ಟು, ಮಹಿಳಾ ರೈತರಿಗೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದ ರೈತರಿಗೆ ಶೇ.40%ರಷ್ಟು ರಿಯಾಯಿತಿ ■ದಾಸ್ತಾನುದಾರರು ಉಗ್ರಾಣದ ರಶೀದಿಗಳನ್ನು ಬ್ಯಾಂಕಿನಲ್ಲಿ ಅಡವಿಟ್ಟು ಸಾಲ ಸೌಲಭ್ಯ ಪಡೆಯಬಹುದು. ■ಉಗ್ರಾಣಗಳಲ್ಲಿ ತೇವಣಿಯಿಟ್ಟ ಸರಕನ್ನು ಒಂದೇ ಬಾರಿ ಸಂಪೂರ್ಣವಾಗಿ ಬಿಡಿಸಿಕೊಳ್ಳಬೇಕೆಂದಾಗಲಿ, ಬ್ಯಾಂಕಿನಿಂದ ಪಡೆದ ಮುಂಗಡವನ್ನು ಒಂದೇ ಬಾರಿ ಸಂಪೂರ್ಣವಾಗಿ ಮರು ಪಾವತಿ ಮಾಡಬೇಕೆಂದಾಗಲಿ ಯಾವ ನಿರ್ಬಂಧವೂ ಇಲ್ಲ. ತೇವಣಿದಾರರು ಬ್ಯಾಂಕಿನಿಂದ ಪಡೆದ ಮುಂಗಡವನ್ನು ಭಾಗಶ: ಮರುಪಾವತಿ ಮಾಡಿ, ಮರುಪಾವತಿ ಮಾಡಿದ ಮೊಬಲಗಿಗೆ ಅನುಗುಣವಾಗಿ ಉಗ್ರಾಣದಿಂದ ಸರಕನ್ನು ಭಾಗಶ: ಬಿಡಿಸಿಕೊಳ್ಳಬಹುದು. ■ಉಗ್ರಾಣದಲ್ಲಿ ದಾಸ್ತಾನು ಮಾಡಿದ ಸರಕನ್ನು ನಿಗದಿತ ಸಮಯದಲ್ಲಿ ಬಿಡುಗಡೆ ಮಾಡುವುದರಿಂದ ಮಾರುಕಟ್ಟೆಯಲ್ಲಿ ಸರಕಿನ ಬೆಲೆಯಲ್ಲಿ ಸ್ಥಿರತೆ ಇರುತ್ತದೆ. ■ಮಾರುಕಟ್ಟೆಯಲ್ಲಿ ಸರಕಿನ ಬೆಲೆ ಕುಸಿದಾಗ ಸಂಕಟ ಮಾರಾಟವನ್ನು ತಪ್ಪಿಸಲು ರೈತರು ಉಗ್ರಾಣ ರಶೀದಿಯ ಆಧಾರದ ಮೇಲೆ ಬ್ಯಾಂಕುಗಳು ಹಾಗೂ ಇತರೆ ಹಣಕಾಸು ಸಂಸ್ಥೆಗಳಿಂದ ಸಾಲವನ್ನು ಪಡೆಯಬಹುದಾಗಿದೆ.

Vijayavani pg 07

ರೈತರಿಗೆ ಸಮ್ಮಾನ ಆಧುನಿಕ ಕೃಷಿ ಸೇರಿ ಒಟ್ಟು 12 ವಿಭಾಗಗಳಲ್ಲಿ ಪ್ರಶಸ್ತಿ | ಪ್ರಶಸ್ತಿಗೆ ಬಂದಿತ್ತು 800ಕ್ಕೂ ಹೆಚ್ಚು ನಾಮ ನಿರ್ದೇಶನ

ಪ್ರತಿಷ್ಠಿತ ರೈತ ರತ್ನ ಪ್ರಶಸ್ತಿಗೆ 12 ಮಂದಿ ಸಾಧಕರ ಆಯ್ಕೆ

'ಕನ್ನಡಪ್ರಭ' ಮತ್ತು 'ಏಷ್ಯಾನೆಟ್ ಸುವರ್ಣ ನ್ಯೂಸ್' ಕೊಡಮಾಡುವ ಪ್ರತಿಷ್ಠಿತ 2026ನೇ ಸಾಲಿನ 'ರೈತ ರತ್ನ' ಪ್ರಶಸ್ತಿಗೆ ಆಯ್ಕೆ

● **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೃಷಿ ಕ್ಷೇತ್ರದಲ್ಲಿ ಅಪ್ರತಿಮ ಸಾಧನೆ ಮಾಡಿದ ನಾಡಿನ ರೈತರಿಗೆ 'ಕನ್ನಡಪ್ರಭ' ಮತ್ತು 'ಏಷ್ಯಾನೆಟ್ ಸುವರ್ಣ ನ್ಯೂಸ್' ಕೊಡಮಾಡುವ ಪ್ರತಿಷ್ಠಿತ 2026ನೇ ಸಾಲಿನ 'ರೈತ ರತ್ನ' ಪ್ರಶಸ್ತಿಗೆ 12 ಸಾಧಕ ರೈತರನ್ನು ಆಯ್ಕೆಮಾಡಲಾಯಿತು.

ಶುಕ್ರವಾರ 'ಕನ್ನಡಪ್ರಭ' ಮತ್ತು 'ಏಷ್ಯಾನೆಟ್ ಸುವರ್ಣ ನ್ಯೂಸ್'ನ ಸಮೂಹ ಸಂಪಾದಕೀಯ ನಿರ್ದೇಶಕ ರಾದ ರವಿ ಹೆಗಡೆ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಪುಗಾರರ ತಂಡ ವಿವಿಧ ವಿಭಾಗಗಳ ಪ್ರಶಸ್ತಿಗೆ ಬಂದ ನಾಮನಿರ್ದೇಶನಗಳನ್ನು ಪರಿಶೀಲಿಸಿ ಅಂತಿಮ ಸಾಧಕರನ್ನು ಆಯ್ಕೆಮಾಡಿತು.

ಆಧುನಿಕ ಕೃಷಿ, ಕೃಷಿ ಸಂಶೋಧಕ ರೈತ, ಕೃಷ್ಯುತ್ಪನ್ನ ಸಂಸ್ಕೃ ಅಥವಾ ವ್ಯಕ್ತಿ, ತೋಟಗಾರಿಕೆ, ಪಶು ಸಂಗೋಪನೆ, ಯುವ ರೈತ, ರೈತ ಮಹಿಳೆ, ಸಾವಯವ ಕೃಷಿ, ಸೇರಿ ಒಟ್ಟು 12 ಪ್ರಶಸ್ತಿಗೆ ನಾಮ ನಿರ್ದೇಶನಗಳನ್ನು ಆಹ್ವಾನಿಸಲಾಗಿತ್ತು. ಪ್ರಶಸ್ತಿಗೆ ಬಂದ 800ಕ್ಕೂ ಹೆಚ್ಚು ನಾಮ ನಿರ್ದೇಶನಗಳನ್ನು ಕನ್ನಡಪ್ರಭ ಸಂಪಾದಕೀಯ ತಂಡ ಪರಿಶೀಲಿಸಿ ಪ್ರತಿ ವಿಭಾಗದಲ್ಲಿ ಹಲವರನ್ನು ಆಯ್ಕೆ ಮಾಡಿತ್ತು. ಈ ಪಟ್ಟಿಯನ್ನು ತೀರ್ಪುಗಾರರ ಸಮಿತಿಯ ಮುಂದೆ ಸಲ್ಲಿಸಿತು. ತೀರ್ಪುಗಾರರ ಸಮಿತಿಯ ಕೃಷಿ ತಜ್ಞರಾದ ಕೃಷ್ಣಪ್ರಸಾದ್ ಜಿ, ಪತ್ರಕರ್ತರೂ ಆದ ಶಿವಾನಂದ ಕಳವೆ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕೃಷಿ ವಿಭಾಗದ ನಿರ್ದೇಶಕ ಮನೋಜ್, ಸೈಲೋ ಫಾರ್ಚೂನ್ ಪ್ರೈವೇಟ್ ಲಿ.ನ ಸಿಇಒ ನವೀನ್, ಬೆಂಗಳೂರು ಕೃಷಿ ವಿವಿ ಉಪಕುಲಪತಿ ಡಾ.ಎಸ್.ವಿ. ಸುರೇಶ್ ಪ್ರತಿ ರೈತರು ಮಾಡಿದ ಸಾಧನೆ, ವಿಶೇಷತೆಗಳನ್ನು ಪರಿಶೀಲಿಸಿ ಪ್ರಶಸ್ತಿಗೆ ಆಯ್ಕೆ ಮಾಡಿದರು.

ಕನ್ನಡಪ್ರಭದ ಪುರವಣಿ ಮುಖ್ಯ ಸಂಪಾದಕ ಜೋಗಿ, ಕಾರ್ಯನಿರ್ವಾಹಕ ಸಂಪಾದಕ ವೆಂಕಟಸುಬ್ಬಯ್ಯ, ಹಿರಿಯ ಸುದ್ದಿ ಸಂಪಾದಕ ಲಕ್ಷ್ಮೀಕಾಂತ್ ಹಾಗೂ ಸುವರ್ಣ ನ್ಯೂಸ್‌ನ ವಿಶೇಷ ಯೋಜನೆ ಸಂಪಾದಕ ವಿನೋದ್ ಕುಮಾರ್‌ನಾಯ್ಕ್ ಉಪಸ್ಥಿತರಿದ್ದರು.



ಕನ್ನಡಪ್ರಭ ಮತ್ತು ಏಷ್ಯಾನೆಟ್ ಸುವರ್ಣ ನ್ಯೂಸ್ ಕೊಡ ಮಾಡುವ 2026ನೇ ಸಾಲಿನ 'ರೈತ ರತ್ನ' ಪ್ರಶಸ್ತಿಗೆ ಸಾಧಕರ ಆಯ್ಕೆ ಕುರಿತು ಸಮೂಹ ಸಂಪಾದಕೀಯ ನಿರ್ದೇಶಕ ರವಿ ಹೆಗಡೆ ಅವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ಶುಕ್ರವಾರ ಸಭೆ ನಡೆಯಿತು.

ತೀರ್ಪುಗಾರರು ಯಾರು?

ಕೃಷಿ ತಜ್ಞ ಕೃಷ್ಣ ಪ್ರಸಾದ್ ಜಿ, ಪತ್ರಕರ್ತ ಶಿವಾನಂದ ಕಳವೆ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕೃಷಿ ವಿಭಾಗದ ನಿರ್ದೇಶಕ ಮನೋಜ್ ಮನೇಜಸ್, ಸೈಲೋ ಫಾರ್ಚೂನ್ ಪ್ರೈವೇಟ್ ಲಿಮಿಟೆಡ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನವೀನ್ ಎಂ.ಹೊನ್ನೇಗೌಡ, ಬೆಂಗಳೂರು ಕೃಷಿ ವಿವಿ ಕುಲಪತಿ ಡಾ.ಎಸ್.ವಿ.ಸುರೇಶ್.

ಪ್ರಶಸ್ತಿ ವಿಭಾಗಗಳು

ಆಧುನಿಕ ಕೃಷಿ, ಕೃಷಿ ಸಂಶೋಧಕ ರೈತ, ಕೃಷ್ಯುತ್ಪನ್ನ ಸಂಸ್ಥೆ ಅಥವಾ ವ್ಯಕ್ತಿ, ತೋಟಗಾರಿಕೆ, ಪಶು ಸಂಗೋಪನೆ, ಯುವ ರೈತ, ರೈತ ಮಹಿಳೆ, ಸಾವಯವ ಕೃಷಿ, ಸುವರ್ಣ ಕೃಷಿ ಶಾಲೆ, ಸುಸ್ಥಿರ ಕೃಷಿ, ವಿಶೇಷ ಪ್ರಶಸ್ತಿ

Kannadaprabha pg 07

Udayavani Pg 06

ನ್ಯಾನೋ ಗೊಬ್ಬರ ಕಡ್ಡಾಯಕ್ಕೆ ರೈತರು ಕಂಗಾಲು


ರಸಗೊಬ್ಬರ ಅಭಾವ, ದರ ಹೆಚ್ಚಳ ಜತೆ ಈಗ 'ಲಿಂಕ್' ತಲೆನೋವು | ನ್ಯಾನೋ ಡಿಎಪಿ ಖರೀದಿಗೆ ರೈತರ ಹಿಂದೇಟು

ಭಾರೀ ನಷ್ಟಕ್ಕೆ ಹೆದರಿದ ವ್ಯಾಪಾರಿಗಳು | ಕಡಿಮೆ ಗೊಬ್ಬರ ದಾಸ್ತಾನಿಂದ ಸಮಸ್ಯೆ | ಯೂರಿಯಾಗೆ 3 ಪಟ್ಟು ಹೆಚ್ಚು ಹಣ

■ ಆಮರೇಗೌಡ ಗೋನವಾರ

ಉದಯವಾಣಿ ಸಮಾಚಾರ

ಹುಬ್ಬಳ್ಳಿ: ರಸಗೊಬ್ಬರ ಅಭಾವ, ದರ ಹೆಚ್ಚಳ, ರಸಗೊಬ್ಬರ ಖರೀದಿಗೆ ಇತರೆ ಉತ್ಪನ್ನಗಳ ಲಿಂಕ್ ಇತ್ಯಾದಿಗಳು ಇದೀಗ ಒಟ್ಟಾರೆಯಾಗಿ ರಸಗೊಬ್ಬರ ವ್ಯಾಪಾರಿಗಳು, ರೈತರನ್ನು ಹೈರಾಣಾಗುವಂತೆ ಮಾಡಿದೆ. ಯೂರಿಯಾಕ್ಕೆ ಬೇಡಿಕೆ ಹೆಚ್ಚುತ್ತಿದ್ದು, ಮತ್ತೆ ಸಮಸ್ಯೆಯಾಗುವ ಆತಂಕ ಗೋಚರಿಸುತ್ತಿದೆ. ಮಾರುಕಟ್ಟೆಯಲ್ಲಿ ಸದ್ಯದ ಸ್ಥಿತಿಯಲ್ಲಿ ಯೂರಿಯಾ ಖರೀದಿಗೆ ರೈತರು 3 ಪಟ್ಟು ಹೆಚ್ಚು ಹಣ ನೀಡಬೇಕಿದ್ದು, ಡಿಎಪಿ, ಪೊಟ್ಯಾಷ್ ರಸಗೊಬ್ಬರ ದರವೂ ಹೆಚ್ಚಳದ ಸಂಕಷ್ಟ ಎದುರಾಗಿದೆ.



ಯೂರಿಯಾ, ಡಿಎಪಿ, ಪೊಟ್ಯಾಷ್ ರಸಗೊಬ್ಬರ ತಯಾರಿಕೆಗೆ ಕಚ್ಚಾ ಸಾಮಗ್ರಿಗೆ ವಿದೇಶಗಳ ಮೇಲೆ ಅವಲಂಬನೆ ಆಗತ್ಯವಾಗಿದ್ದು ಈಗ ಎದುರಾಗಿರುವ ಸಮಸ್ಯೆಗೆ ಮಧ್ಯಪ್ರಾಚ್ಯ ಯುದ್ಧವೂ ಪ್ರಬಲ ಕಾರಣವಾಗಿದೆ. ಈ ಬಾರಿ ಮುಂಗಾರು ಹಂಗಾಮಿಗೆ ರಸಗೊಬ್ಬರ ಕೊರತೆ ಆಗಬಹುದು ಎಂಬುದನ್ನು ಸರ್ಕಾರಗಳೂ ಒಪ್ಪಿಕೊಳ್ಳುತ್ತಿದ್ದು ಮತ್ತೊಮ್ಮೆ ರಸಗೊಬ್ಬರ ಗದ್ದಲ ಸೃಷ್ಟಿಗೇ ಎಂಬ ಕಳವಳ ಮೂಡಿದೆ.

ಲಿಂಕ್ ಸಮಸ್ಯೆ: ಮುಂಗಾರು ಹಂಗಾಮಿಗೆ ಸಾಮಾನ್ಯವಾಗಿ ರೈತರಿಂದ ಯೂರಿಯಾ ರಸಗೊಬ್ಬರಕ್ಕೆ ಹೆಚ್ಚಿನ ಬೇಡಿಕೆ ಬರುತ್ತದೆ. ಈ ಬಾರಿಯೂ ಆದೇ ಸ್ಥಿತಿ ಇದೆ. ಆದರೆ ರಸಗೊಬ್ಬರದ ಕೊರತೆ ಎದ್ದು ಕಾಣುತ್ತಿದ್ದು ಇದರ ಬೆನ್ನಲ್ಲೇ ಮಾರುಕಟ್ಟೆ ಶಕ್ತಿಗಳ ಕುಣಿತವೂ ಶುರುವಾಗಿದೆ. ಒಂದು ಚೀಲ ಯೂರಿಯಾ (50 ಕೆಜಿ) 260 ರೂ.ಗೆ ಮಾರಾಟ ಗಾರರಿಗೆ ದೊರೆಯಬೇಕಿತ್ತು. ರೈತರಿಗೆ 300 ರೂ.ಗೆ ಮಾರಾಟವಾಗಬೇಕಿತ್ತು.

ಲಿಂಕ್ ನಿಂದ ಭಾರೀ ಸಮಸ್ಯೆ

ರಸಗೊಬ್ಬರ ಖರೀದಿಗೆ ಇತರೆ ಉತ್ಪನ್ನಗಳ ಲಿಂಕ್ ಸಮಗೆ ಸಮಸ್ಯೆ ಸೃಷ್ಟಿಸುತ್ತಿದೆ. ರಸಗೊಬ್ಬರ ದರಗಳು ಹೆಚ್ಚಳವಾಗಿದ್ದು, ರೈತರು ಸಂಕಷ್ಟ ಪಡುವಂತಾಗಿದೆ. 6-7 ಲೋಡ್ ರಸಗೊಬ್ಬರ ತರಿಸುವವರು ಇದೀಗ 2-3 ಲೋಡ್ ಸಾಕು ಎನ್ನುತ್ತಿದ್ದಾರೆ. ಸರ್ಕಾರ ರಸಗೊಬ್ಬರ ಸಮಸ್ಯೆ, ಗೊಂದಲಕ್ಕೆ ಕ್ರಮ ಕೈಗೊಂಡು ರೈತರ ಹಿತ ಕಾಯಬೇಕಿದೆ.

● **ಹೆಸರು ಹೇಳಲು ಇಚ್ಛಿಸದ ರಸಗೊಬ್ಬರ ಮಾರಾಟಗಾರ**

ಉತ್ತರ ಕರ್ನಾಟಕದ ಒಂಭತ್ತು ಜಿಲ್ಲೇಲಿ ರಸಗೊಬ್ಬರ ಕೊರತೆ

ಹುಬ್ಬಳ್ಳಿ: ಬೇಸಿಗೆ ಮಳೆ ಆರ್ಭಟಿಸದ ಬೆನ್ನಲ್ಲೇ ರಾಜ್ಯದಲ್ಲಿ ಮುಂಗಾರು ಬಿತ್ತನೆ ಕಾರ್ಯ ಚುರುಕುಗೊಂಡಿದ್ದು, ಅನ್ನದಾತರು ಕೃಷಿ ಚಟುವಟಿಕೆಯಲ್ಲಿ ನಿರತರಾಗಿದ್ದಾರೆ. ಆದರೆ, ಮಧ್ಯಪ್ರಾಚ್ಯದ ಯುದ್ಧದ ಕಾರ್ಮೋಡದಿಂದ ರಸಗೊಬ್ಬರದ ಕೊರತೆ ಎದುರಾಗಿದ್ದು, ಅಂಗಡಿಗಳ ಮುಂದೆ ಹಗಲಿರುಳು ಸರತಿ ನಿಲ್ಲುವ ದುಸ್ಥಿತಿ ಎದುರಾಗಿದೆ. ಈಗಲೇ ತಳ್ಳಾಟ-ನೂಕಾಟ ಶುರುವಾಗಿದ್ದು ಪರಿಸ್ಥಿತಿ ಬಿಗಡಾಯಿಸುವ ಮುನ್ಸೂಚನೆ ನೀಡಿದೆ. ಉತ್ತರ ಕರ್ನಾಟಕದ ಬೀದರ್, ಬೆಳಗಾವಿ, ಹಾವೇರಿ, ಗದಗ, ಯಾದಗಿರಿ, ಕೊಪ್ಪಳ, ದಾವಣಗೆರೆ, ರಾಯಚೂರು, ಶಿವಮೊಗ್ಗ ಜಿಲ್ಲೆಗಳಲ್ಲಿ ರಸಗೊಬ್ಬರ ದಾಸ್ತಾನು ಭಾರೀ ಪ್ರಮಾಣದಲ್ಲಿ ಕಡಿಮೆ ಇದ್ದು ರೈತರು ಕಂಗಾಲಾಗಿದ್ದಾರೆ. ▶ ವಿವರ: 4

A count for Asia's vanishing buntings

A first-of-its-kind, internationally-coordinated census has recorded 187,310 Yellow-breasted Buntings across six Asian countries, offering the clearest picture yet of the endangered species that has lost up to 95% of its population since 1980.

The count, conducted between mid-February and mid-March 2026, involved researchers from Nepal, India, Myanmar, Thailand, Laos, and Cambodia. Thailand recorded the highest numbers (126,076 birds across six sites), followed by Myanmar (49,086) and Cambodia (10,407). Nepal counted 1,741 birds. No major roost was found in Laos.

Surveyors found it difficult to count roosts in India using the current protocol, but birders have observed many hundreds of Yellow-breasted Buntings there that winter, says Ashwin Viswanathan of Bird Count India.



Once among the most abundant landbirds in Eurasia — with a global population estimated at over 100 million before the 1990s — the Yellow-breasted Bunting has been on the IUCN Critically Endangered list since 2017. Mass hunting along migratory routes is considered the primary driver of its collapse, compounded by the destruction of wetlands and farmland, as well as the use of agrochemicals.

Researchers say that 187,310 represents a fraction of the true population, since the census covered a limited number of roost sites and did not account for birds roosting outside the counted areas. The figure is intended as a baseline for